ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಚುನಾವಣೆ

ಪತ್ರಿಕೆಯ ಹೆಸರು : NAME OF THE NEWS PAPER: ಪ್ರಜಾವಾಣಿ

ದಿನಾಂಕ : DATE: 29/9/20

**2018ರಲ್ಲಿ ಜಯ ಗಳಿಸಿದ್ದ ಪ್ರತಾಪಗೌಡ**

‘ಚುನಾವಣಾ ತಕರಾರು ಅರ್ಜಿಗಳು ವಜಾಗೊಂಡಿದ್ದು ಸಂತಸ ತಂದಿದೆ’ ಎಂದು ಅನರ್ಹ ಶಾಸಕ ಪ್ರತಾಪಗೌಡ ಪಾಟೀಲ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

# ಮಸ್ಕಿ: ಉಪ ಚುನಾವಣೆ ದಾರಿ ಸುಗಮ

ಪ್ರ.ವಾ. 29-9.2020

ಮಸ್ಕಿ (ರಾಯಚೂರು ಜಿಲ್ಲೆ): ಮಸ್ಕಿ ವಿಧಾನಸಭಾ ಕ್ಷೇತ್ರದ ಚುನಾವಣೆ ತಕರಾರು ಅರ್ಜಿಗಳನ್ನು ಹೈಕೋರ್ಟ್ ಸೋಮವಾರ ವಜಾಗೊಳಿಸಿದ್ದು, ಇದರಿಂದಾಗಿ ಉಪಚುನಾವಣೆಯ ದಾರಿ ಸುಗಮವಾದಂತಾಗಿದೆ.



2018ರ ಚುನಾವಣೆಯಲ್ಲಿ 213 ಮತಗಳ ಅಂತರದಿಂದ ಪ್ರತಾಪಗೌಡ ಪಾಟೀಲ ಜಯಗಳಿಸಿದ್ದರು. ಆಗ ಬಿಜೆಪಿ ಅಭ್ಯರ್ಥಿಯಾಗಿದ್ದ ಆರ್. ಬಸನಗೌಡ ಅವರು, ‘ಅಕ್ರಮ ಮತದಾನದಿಂದ ಪ್ರತಾಪಗೌಡ ಪಾಟೀಲ ಗೆಲವು ಸಾಧಿಸಿದ್ದಾರೆ. ಅವರ ಆಯ್ಕೆ ಅಸಿಂಧು ಗೊಳಿಸಬೇಕು’ ಎಂದು ಪ್ರಕರಣ ದಾಖಲಿಸಿದ್ದರು.

ಸತತ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ಎಸ್. ಮುದಗಲ್ ಅವರು, ದಾಖಲೆಗಳ ಕೊರತೆ ಎಂಬ ಕಾರಣಕ್ಕೆ ಆರ್. ಬಸನಗೌಡ ಸೇರಿದಂತೆ ಇತರರು ದಾಖಲಿಸಿದ್ದ ಎಲ್ಲ ಪ್ರಕರಣಗಳನ್ನು ವಜಾಗೊಳಿಸಿದರು.

ಕಾಂಗ್ರೆಸ್ ಶಾಸಕರು ರಾಜೀನಾಮೆ ಕೊಟ್ಟ ವೇಳೆ ಈ ಕ್ಷೇತ್ರದ ಪ್ರತಾಪಗೌಡ ಕೂಡ ರಾಜೀನಾಮೆ ಕೊಟ್ಟಿದ್ದರು. ತಕರಾರು ಅರ್ಜಿ ಕೋರ್ಟ್ ಮುಂದೆ ಇದ್ದುದರಿಂದ ಉಪಚುನಾವಣೆ ನಡೆದಿರಲಿಲ್ಲ. ಈಗ ಅವುಗಳೆಲ್ಲ ವಜಾ ಗೊಂಡಿದ್ದರಿಂದ ಉಪಚುನಾವಣೆಯ ದಾರಿ ಸುಗಮವಾದಂತಾಗಿದೆ.